**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 183/2020**

ಪಿ ಡಬ್ಲ್ಯೂ -1

**ದಿನಾಂಕ 24-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎಚ್ ಕೆ ಎಚ್ ಪ್ರತಿ ವಾದಿ ಪರ ವಕೀಲರುಃ**

ನನ್ನ ಅಧಿಕಾರ ಪತ್ರವನ್ನು ಅಕ್ರಮ ಲಾಭ ಪಡೆಯುವ ಸಲುವಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ ಬಂದಿ ಪೂರ್ವಕ್ಕೆ ಜಗನ್ನಾಥರವರ ಜಮೀನು, ಪಶ್ಚಿಮಕ್ಕೆ- ರಸ್ತೆ, ಉತ್ತರಕ್ಕೆ - ಕರೀಗೌಡರ ಜಮೀನು, ದಕ್ಷಿಣಕ್ಕೆ ರಸ್ತೆ. ಸದರಿ ಚೆಕ್ ಬಂದಿಯನ್ನು ಸಂಪೂರ್ಣ ತಪ್ಪಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಚೆಕ್ ಬಂದಿ ಮತ್ತು ನಾನು ಹೇಳಿರುವ ಚೆಕ್ ಬಂದಿ ಎರಡಕ್ಕೂ ತಾಳೆ ಇಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. 1972 ರ ವಿಭಾಗ ಪತ್ರದ ಮುಖೇನ ಅವರಿಗೆ ಲಲಿತಮ್ಮನವರಿಗೆ 6 ಗುಂಟೆ ಜಮೀನು ಬಂದಿರುತ್ತದೆ. ಸರ್ವೆ ನಂಬರ 194 ರಲ್ಲಿ 6 ಗುಂಟೆ ಜಮೀನನ್ನು ಹೊರತು ಪಡಿಸಿ ಬೇರೆ ಯಾವ ಜಮೀನು ಇಲ್ಲ ಎಂದರೆ ಸರಿ. ನಿಪಿ-2 ಆರ್ ಟಿ ಸಿ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ನನಗೆ ನಿಪಿ-2 ಎಷ್ಟು ಪುಟ ಇದೆ ಎಂದು ನನಗೆ ಗೊತ್ತಿಲ್ಲ.

3. 1971-72 ನೇ ರ ಎಮ್ ಆರ್ 55/135/71/72 ರಂತೆ ಖಾತೆ ಲಲಿತಮ್ಮನವರ ಹೆಸರಿಗೆ ಬಂದಿದೆ ಎಂದರೆ ಸರಿ. ದಾವಾ ಸ್ವತ್ತು ಮತ್ತು ಲಲಿತಮ್ಮ ನವರಿಗೆ ವಿಭಾಗದಲ್ಲಿ ಬಂದ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ-2 ರ ಪ್ರಕಾರ ಲಲಿತಮ್ಮನವರ ಹೆಸರಿನಲ್ಲಿ ಕೇವಲ 4 ½ ಜಮೀನು ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನು ಲಲಿತಮ್ಮ ನವರಿಗೆ ಸೇರಿರುತ್ತದೆ. ಲಲಿತಮ್ಮನವರಿಗೆ ಕೇವಲ 6 ಗುಂಟೆ ಜಮೀನು ಇರುತ್ತದೆ. 4 ½ ಗುಂಟೆ ಜಮೀನು ಇರುವುದಿಲ್ಲ.

4. ಸದರಿ ನಿಪಿ-2 ರಲ್ಲಿ ನಮೂದಾಗಿರುವ 4 ½ ಗುಂಟೆ ಜಮೀನು ಪ್ರತಿವಾದಿಗಳ ಜಮೀನು ಎಂದರೆ ಸರಿ ಸರ್ವೇ ನಂಬರ 194 ರಲ್ಲಿ ನಮ್ಮ ಕುಟುಂಬಕ್ಕೆ ಎಷ್ಟು ಜಮೀನು ಇತ್ತು ಎಂದು ಗೊತ್ತಿಲ್ಲ. ಸರ್ವೇ ನಂಬರ 194 ಪ್ರಸ್ತುತ ಪೋಡಾಗಿ 6 ಎಕರೆ 7 ¾ ಗುಂಟೆ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1972 ರ ವಿಭಾಗ ಪತ್ರದ ಮುಖಾಂತರ ಯಾರು ಯಾರಿಗೆ ಎಷ್ಟು ಪ್ರಮಾಣದ ಜಮೀನು ನನಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

5. ಸದರಿ 1972 ರ ವಿಭಾಗ ಪತ್ರದನ್ವಯ ಹೆಣ್ಣುಮಕ್ಕಳಿಗೆ ತಲಾ 6 ಗುಂಟೆ ಜಮೀನು ಬಂದಿರುತ್ತದೆ. ಅದೇ ರೀತಿ ನನಗೆ 36 ಗುಂಟೆ ಜಮೀನು ಬಂದಿರುತ್ತದೆ. ನಮ್ಮ ಅಣ್ಣ ಶಾಮಣ್ಣನಿಗೆ 27 ಗುಂಟೆ ಬಂದಿರುತ್ತದೆ. ತುಕಾರಾಮನವರಿಗೆ 30 ಗುಂಟೆ ಬಂದಿರುತ್ತದೆ. ನಮ್ಮ ತಂದೆ ತಾಯಿಗೆ ಯಾವುದೇ ಭಾಗಾಂಶ ನೀಡಿರುವುದಿಲ್ಲ.

6. ನನ್ನ ಭಾಗಾಂಶಕ್ಕೆ ಬಂದ ಜಮೀನಿನ ಪೂರ್ವಕ್ಕೆ ರತ್ನಮ್ಮರವರ ಜಮೀನು ಪಶ್ಚಿಮಕ್ಕೆ ರಸ್ತೆ ಇರುತ್ತದೆ. ಸರ್ವೇ ನಂಬರ 194/1 ಎ/1 ರಲ್ಲಿ ನಮ್ಮ ಕುಟುಂಬಕ್ಕೆ ನಿರ್ದಿಷ್ಟವಾಗಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಲಲಿತಮ್ಮನವರು ಅವರ ಭಾಗಕ್ಕೆ ಬಂದ 6 ಗುಂಟೆ ಜಮೀನಿಗೆ ಸರ್ವೇ ನಕ್ಷೆಯನ್ನು ಮಾಡಿಸಿರುತ್ತಾರೆ. ಸದರ ಸರ್ವೇ ನಕ್ಷೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

7. ನಾವು ಯಾವುದೇ ಸರ್ವೇ ನಕ್ಷೆಯನ್ನು ಮಾಡಿಸದೇ ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ನಾನು ಸರ್ವೆ ನಕ್ಷೆಯನ್ನು ಮಾಡಿಸಿರುತ್ತೇನೆ. ನಾನು ನಮ್ಮ ಪರವಾಗಿ ಯಾವೆಲ್ಲ ದಾಖಲೆಗಳನ್ನು ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಮ್ಮ ಅಣ್ಣ ತುಕಾರಾಮ, ಶ್ಯಾಮಣ್ಣ ಮತ್ತು ಅಪ್ರಾಪ್ತನಾಗಿದ್ದ ನನ್ನ ಪರವಾಗಿಯಾ ಸಹ ಪ್ರತಿವಾದಿಗಳ 1 ನೇ ಪ್ರತಿವಾದಿಯ ಮಾವ 2 ರಿಂದ 4 ನೇ ಪ್ರತಿವಾದಿಗಳ ತಾತನಾದ ರಾಮಚಾರಿಯವರಿಗೆ 1967 ನೇ ಇಸವಿಯಲ್ಲಿ ದಿಃ

29-08-1967 ರಂದು ದಾವಾ ಷೆಡ್ಯೂಲ್ ಸ್ವತ್ತಿನ ಪೈಕಿ 4 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

8. ನನಗೆ ಮಿರ್ಲೆಯ ಮಂಚಚಾರಿಯ ಮಗ ರಾಮಚಾರಿ ನನಗೆ ಗೊತ್ತು. ಅವರು ದಾವಾ ಸ್ವತ್ತಿನಲ್ಲಿ ಮನೆಯನ್ನುನಿರ್ಮಾಣ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸರಿಯಲ್ಲ. ದಿಃ 29-08-1967 ರ ರೀತ್ಯಾ ನಮ್ಮ ಅಣ್ಣ ಪೂರ್ವ ಪಶ್ಚಿಮ 40 ಅಡಿ ಉತ್ತರ ದಕ್ಷಿಣ 90 ಅಡಿ ಜಮೀನನ್ನು ಮಂಚಚಾರಿಯ ಮಗ ರಾಮಚಾರಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರರ ಸಹಿಗಳನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

10. ನಾನು ಅಪ್ರಾಪ್ತರಾಗಿದ್ದರಿಂದ ನನಗೆ ಸದರಿ ಕ್ರಯ ಪತ್ರದ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಲಲಿತಮ್ಮ ನವರು ಹದ್ದು ಬಸ್ತು ನಕ್ಷೆಯನ್ನು ತಯಾರಿಸಲು ಅರ್ಜಿಯನ್ನು ನೀಡಿರುತ್ತೇವೆ. ಸದರಿ ಅರ್ಜಿಯನ್ನು 2 ವರ್ಷದ ಹಿಂದೆ ನೀಡಿರುತ್ತೇನೆ. ಲಲಿತಮ್ಮ ನವರು ದಾವೆನಯನ್ನು ಸಲ್ಲಿಸುವ ಪೂರ್ವದಲ್ಲಿ ಯಾವ ಅರ್ಜಿಯನ್ನು ಹದ್ದುಬಸ್ತು ನಕ್ಷೆಯನ್ನು ತಯಾರಿಸಲು ನೀಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**11**. ಪ್ರತಿವಾದಿಗಳು ಲಲಿತಮ್ಮ ನವರ ಜಮೀನಿಗೆ ಒತ್ತುವರಿ ಮಾಡಿದ ಕುರಿತು ಲಲಿತಮ್ಮ ನವರಿಗೆ 4-5 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಮ್ಮ ಅಕ್ಕಮತ್ತು ಭಾವನವರು ನೀಡಿರುತ್ತಾರೆ. ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ.

**12**. ಸದರಿ ದಾವಾ ಸ್ವತ್ತು ಒತ್ತುವರಿಯಾಗಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿದ್ದೇನೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಹಂಚಿನ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಆದರೆ ಆರ್ ಆರ್ ಸಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ  ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ